Phone : 0824-2287824 / 2287281
E-mail : doorashikshana@gmail.com

# ಮಂಗಳೂರು ವಿಶ್ವವಿದ್ಯಾನಿಲಯ
# MANGALORE UNIVERSITY

ನಿರ್ದೇಶಕರ ಕಛೇರಿ
ದೂರ ಶಿಕ್ಷಣ ಕೇಂದ್ರ, ವಾಣಿಜ್ಯ ಸಂಕೀರ್ಣ
ಮಂಗಳಗಂಗೋತ್ರಿ, ಮಂಗಳೂರು-574 199
ದ. ಕ. ಜಿಲ್ಲೆ, ಕರ್ನಾಟಕ

Office of the Director
Centre for Distance Education
Shopping Complex, Mangalagangothri
Mangalore – 574 199, D.K. Karnataka

ಸಂ: ಮವಿ/ದೂ.ಶಿ.ಕೇ./ಬಿ.ಎಡ್.(ODL)/2020-21

ದಿನಾಂಕ: 29.09.2021

ಪ್ರೀತಿಯ ವಿದ್ಯಾರ್ಥಿ/ವಿದ್ಯಾರ್ಥಿನಿಯರೇ,

**ವಿಷಯ:** 2019-20ನೇ ಸಾಲಿನ ಪ್ರಥಮ ಬಿ.ಎಡ್.(ಮುಕ್ತ ಮತ್ತು ದೂರ ಕಲಿಕೆ) ಪದವಿ ಕಾರ್ಯಕ್ರಮದ ವಿದ್ಯಾರ್ಥಿಗಳಿಗೆ ಸಂಪರ್ಕ ಕಾರ್ಯಕ್ರಮ-2ನ್ನು ಆಯೋಜಿಸುವ ಕುರಿತು.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2019-20ನೇ ಶೈಕ್ಷಣಿಕ ಸಾಲಿನ ಪ್ರಥಮ ವರ್ಷದ ಬಿ.ಎಡ್.(ODL) ಪದವಿ ಕಾರ್ಯಕ್ರಮದ ವಿದ್ಯಾರ್ಥಿಗಳಿಗೆ ವಿವಿಧ ಅಧ್ಯಯನ ಕೇಂದ್ರಗಳಲ್ಲಿ **ದಿನಾಂಕ 11.10.2021 ರಿಂದ 15.10.2021ರವರೆಗೆ** ಸಂಪರ್ಕ ಕಾರ್ಯಕ್ರಮದ ತರಗತಿಗಳನ್ನು **ಆನ್‌ಲೈನ್(Online)** ಮೂಲಕ ಹಾಗೂ **16.10.2021 ರಿಂದ 27.10.2021ರವರೆಗೆ ಭೌತಿಕವಾಗಿ (Offline-Face to Face Mode) ಮಾದರಿಯಲ್ಲಿ ಒಟ್ಟು 15 ದಿವಸಗಳ ಸಂಪರ್ಕ ಕಾರ್ಯಕ್ರಮ-2ನ್ನು** ಆಯೋಜಿಸಲಾಗುತ್ತಿದ್ದು ಪ್ರಥಮ ವರ್ಷಕ್ಕೆ ನೋಂದಣಿಯಾಗಿರುವ ವಿದ್ಯಾರ್ಥಿಗಳು ಮತ್ತು ಪುನರಾವರ್ತಿತ ವಿದ್ಯಾರ್ಥಿಗಳು ಸೇರಿದಂತೆ, ಎಲ್ಲಾ ವಿದ್ಯಾರ್ಥಿಗಳು ಈಗಾಗಲೇ ಹಂಚಿಕೆಯಾಗಿರುವ ತಮ್ಮ ಅಧ್ಯಯನ ಕೇಂದ್ರದಲ್ಲಿ ಸದರಿ ಸಂಪರ್ಕ ಕಾರ್ಯಕ್ರಮದ ಆನ್‌ಲೈನ್ / ಆಫ್‌ಲೈನ್ ತರಗತಿಗಳಿಗೆ ಹಾಜರಾಗುವಂತೆ ತಿಳಿಸಲಾಗಿದೆ.

**2019-20ನೇ ಸಾಲಿನ ಪ್ರಥಮ ಬಿ.ಎಡ್.(ಮುಕ್ತ ಮತ್ತು ದೂರ ಕಲಿಕೆ) ಪದವಿ ಕಾರ್ಯಕ್ರಮದ ಎರಡನೇ ಸಂಪರ್ಕ ಕಾರ್ಯಕ್ರಮ ಕುರಿತ ಸೂಚನೆಗಳು**

1. ಎಲ್ಲಾ ವಿದ್ಯಾರ್ಥಿಗಳು ಈ ಮೇಲೆ ತಿಳಿಸಿದ ದಿನಾಂಕಗಳಂದು ಎರಡನೇ ಸಂಪರ್ಕ ಕಾರ್ಯಕ್ರಮದ ತರಗತಿಗಳಿಗೆ(ಮೊದಲನೇ ಸಂಪರ್ಕ ಕಾರ್ಯಕ್ರಮದಲ್ಲಿ ನಿಯೋಜಿಸಲಾಗಿದ್ದ) ತಮ್ಮ ಅಧ್ಯಯನ ಕೇಂದ್ರದಲ್ಲಿ ಹಾಜರಾಗತಕ್ಕದ್ದು.
2. ನೀವು ಬರುವಾಗ ನಿಮ್ಮ ಗುರುತು ಚೀಟಿ ಮತ್ತು ಈ ಪತ್ರವನ್ನು ಜೊತೆಯಲ್ಲಿ ತರುವುದು.
3. ಸಂಪರ್ಕ ಕಾರ್ಯಕ್ರಮದ ಅವಧಿಯಲ್ಲಿ ಎರಡನೇ ವರ್ಷದ 'ಇಂಟರ್ನ್‌ಶಿಪ್' ಕಾರ್ಯಕ್ರಮಕ್ಕೆ ನಿಮ್ಮನ್ನು ಸಿದ್ಧಗೊಳಿಸಲಾಗುವುದು. ಇದಕ್ಕೆ ಸಂಬಂಧಿಸಿದಂತೆ ಅಗತ್ಯವಾದ ಎಲ್ಲ ಕಲಿಕಾ ಅನುಭವಗಳನ್ನು ಈ ಅವಧಿಯಲ್ಲಿ ನೀಡಲಾಗುವುದು.
4. ಸಿದ್ಧತೆಯ ಈ ಸಮಯದಲ್ಲಿ ನಿಮಗೆ ನಿಮ್ಮ ಬೋಧನಾ ಪದ್ಧತಿ ವಿಷಯಗಳಿಗೆ ಸಂಬಂಧಿಸಿದ (Methodology) 8, 9 ಮತ್ತು 10ನೇ ತರಗತಿಯ ಪಠ್ಯ ಪುಸ್ತಕಗಳ ಅಗತ್ಯವಿರುತ್ತದೆ. ಹಾಗಾಗಿ ಈ ತರಗತಿಗಳ ಪಠ್ಯ ಪುಸ್ತಕಗಳನ್ನು ತಪ್ಪದೇ ತರುವುದು.
5. ಈ ಅವಧಿಯಲ್ಲಿ ನೀವು ಆಯ್ಕೆ ಮಾಡಿಕೊಂಡಿರುವ ಪ್ರತಿ ಬೋಧನಾ ಪದ್ಧತಿ ವಿಷಯಗಳಲ್ಲಿ ಎರಡು ಪಾಠಗಳನ್ನು ಅಣಕು ಮಾದರಿಯಲ್ಲಿ (in Simulation) ಬೋಧಿಸಬೇಕು. ಈ ಬೋಧನೆಗೆ ಆಂತರಿಕ ಮೌಲ್ಯಮಾಪನ ಮಾಡಲಾಗುತ್ತದೆ. ಈ ಹಿನ್ನೆಲೆಯಲ್ಲಿ ನಿಮ್ಮ ಆಯ್ಕೆಯ ಕೆಲವು ಪಾಠ ವಿಷಯಗಳನ್ನು ಮತ್ತು ಸಂಬಂಧಿತ ಸಂಪನ್ಮೂಲಗಳನ್ನು ಸಿದ್ಧಪಡಿಸಿಕೊಂಡು ಬರುವುದು ಅಪೇಕ್ಷಣೀಯ. ಬೋಧನೆಗೆ ಅಗತ್ಯವಾದ ಎಲ್ಲ ರೀತಿಯ ಕಲಿಕಾ ಅನುಭವಗಳಿಗೆ ಮಾರ್ಗದರ್ಶನ ನೀಡಲಾಗುವುದು.
6. ಎಲ್ಲಾ ವಿದ್ಯಾರ್ಥಿಗಳು ಹೆಚ್ಚಿನ ಮಾಹಿತಿಗಾಗಿ ವಿಶ್ವವಿದ್ಯಾನಿಲಯದ ಈ ಕೆಳಗಿನ ವೆಬ್‌ಸೈಟ್ ವಿಳಾಸವನ್ನು ಸಂಪರ್ಕಿಸುವುದು.
7. ಎಲ್ಲಾ ವಿದ್ಯಾರ್ಥಿಗಳು ಕೋವಿಡ್-19ರ ಮಾರ್ಗಸೂಚಿಗಳನ್ನು ತಪ್ಪದೇ ಪಾಲಿಸುವುದು.

**www.mangaloreuniversity.ac.in ⟹ Centre for Distance Education ⟹ B.Ed.(ODL)**

ನಿರ್ದೇಶಕರು
Director
CENTRE FOR DISTANCE EDUCATION
Mangalore University
Mangalagangothri - 574 199.

ಇವರಿಗೆ:
ಸಂಬಂಧಪಟ್ಟ ಎಲ್ಲಾ ವಿದ್ಯಾರ್ಥಿಗಳಿಗೆ.